ಆಗಿದ್ದು ಈತ ತಲೆಮರೆಸಿಕೊಂಡಿದ್ದಾನೆ. ಜೈಲಿನೊಳಗೆ ನಿಂದಲೇ ಕೆಆರ್‌ಪುರದ ಸುತ್ತಮುತ್ತಲಿನ ಉದ್ಯಮಿಗಳು, ... ಆರೋಪಿಗಳಿಗೆ ಶೋಧ ನಡೆಯುತ್ತಿದೆ. ... ಕೆಲಸವಾಗಬೇಕು, ಇದು ನಮ್ಮ

## ಟೈಮ್ಸ್ ಆಫ್ ಇಂಡಿಯಾದಲ್ಲಿ ಮಿಂಚಿದ ಶಾಲೆಗೆ ಸ್ಟೇಟ್ ಅವಾರ್ಡ್

# ವಿದೇಶಿಯರ ಮನಗೆದ್ದ ಸರಕಾರಿ ಶಾಲೆ!

■ **ತೇಜಸ್** ತಾವರೆಕೆರೆ

ಇಲ್ಲೊಂದು ಸರಕಾರಿ ಶಾಲೆಯಿದೆ. ಈ ಶಾಲೆಯ ಮಕ್ಕಳ ಪ್ರತಿಭೆ ಕಂಡು ದೇಶ-ವಿದೇಶಗಳ ಗಣ್ಯರು ಮನಸೋತಿದ್ದಾರೆ. ಅಮೆರಿಕ, ಸ್ವೀಡನ್ ಮೊದಲಾದ ದೇಶಗಳ ಜನರು ಶಾಲೆಗೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪೋಷಕರಂತೂ ಖಾಸಗಿ ಶಾಲೆಯಿಂದ ತಮ್ಮ ಮಕ್ಕಳನ್ನು ಬಿಡಿಸಿ ತಂದು ಈ ಶಾಲೆಗೆ ಸೇರಿಸುತ್ತಾರೆ. ಅಷ್ಟೊಂದು ಹೆಸರಿದೆ ಈ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ.

**ದೂರದ ಹಳ್ಳಿ ಒಂದೇ ಬಸ್**

ಹೊಸಕೋಟೆ ತಾಲೂಕಿನ ಬೈಲುನರಸಾಪುರ ಗ್ರಾಮ ವ್ಯಾಪ್ತಿಯಲ್ಲಿ ಅಂದಾಜು 600ರಷ್ಟು ಜನಸಂಖ್ಯೆ ಹೊಂದಿರುವ ಮಾರಸಂಡಹಳ್ಳಿ ಗ್ರಾಮದಲ್ಲಿರುವ ಕಿರಿಯ ಪ್ರಾಥಮಿಕ ಶಾಲೆಯೇ ಈ ರೀತಿ ಹೆಸರು ಮಾಡಿರುವ ಶಾಲೆ. 1963 - 1964ರಲ್ಲಿ ಪ್ರಾರಂಭಗೊಂಡಿರುವ ಈ ಚೆಂದದ ಶಾಲೆಯಲ್ಲಿ 1ರಿಂದ 5ರವರೆಗೆ ತರಗತಿಗಳಿವೆ. ವಿಶೇಷವೆಂದರೆ ಈ ಶಾಲೆಯಲ್ಲಿ ಇರುವುದು ಇಬ್ಬರೇ ಶಿಕ್ಷಕರು. ಮಾರಸಂಡಹಳ್ಳಿ, ಸತ್ತಿಗಾನಹಳ್ಳಿಯಿಂದ ಈ ಶಾಲೆಗೆ ವಿದ್ಯಾರ್ಥಿಗಳು ಬರುತ್ತಾರೆ. ತಾವರೆಕೆರೆಯಿಂದ 4 ಕಿ.ಮೀ. ದೂರದ ಕೋಲಾರ ಗಡಿಭಾಗದಲ್ಲಿ ಈ ಶಾಲೆಯಿದ್ದು, ಶಾಲೆಗೆ ಹೋಗಲು ಇರುವುದು ಒಂದೇ ಬಸ್. ಅದು ತಪ್ಪಿದರೇ ನಡೆದುಕೊಂಡೇ ಹೋಗಬೇಕು.

**ಎದೆಗುಂದದ ವಿದ್ಯಾರ್ಥಿಗಳು**

ಶಿಕ್ಷಕರು ಇಬ್ಬರಾದರೂ, ಅವರ ಪಾಠದ ಗುಣಮಟ್ಟ ಎಷ್ಟು ಉತ್ಕೃಷ್ಟವಾಗಿದೆಯೆಂದರೆ, ಬಸ್ ಇಲ್ಲದಿದ್ದರೂ ಪರವಾಗಿಲ್ಲ, ನಡೆದರೂ ಪರವಾಗಿಲ್ಲ, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಈ ಶಾಲೆಯೇ ಬೇಕು. ಹಲವು ಪೋಷಕರು, ಖಾಸಗಿ ಶಾಲೆಗಳಲ್ಲಿ ಓದುತ್ತಿದ್ದ ತಮ್ಮ ಮಕ್ಕಳನ್ನು ಬಿಡಿಸಿ ತಂದು ಈ ಶಾಲೆಗೆ ದಾಖಲಿಸಿದ್ದಾರೆ. ಬೇರೆಲ್ಲಾ ಶಾಲೆಗಳಲ್ಲಿ ಶಿಕ್ಷಕರ ವಿರುದ್ಧ ಪೋಷಕರದ್ದು ನೂರೆಂಟು ದೂರುಗಳಿದ್ದರೆ, ಈ ಶಾಲೆಯಲ್ಲಿ ಬೆನ್ನೆಲುಬಾಗಿರುವ ಇಬ್ಬರು ಶಿಕ್ಷಕರಿಗೆ ಪೋಷಕರ ಸಂಪೂರ್ಣ ಬೆಂಬಲವಿದೆ.

**ಅಕ್ಷರ ಗಣಿತ ಪರಿಣತರು**

ಇಲ್ಲಿನ ಗುರುಗಳು ಮಕ್ಕಳಿಗೆ ಅಕ್ಷರ ಗಣಿತ ವಿಶೇಷವಾಗಿ ಕಲಿಸುವುದೇ ಇವರ ಬೋಧನಾ ವಿಧಾನದ ಚಮತ್ಕಾರ. ಅಕ್ಷರ ಫೌಂಡೇಶನ್‌ನ ಸಹಯೋಗದೊಂದಿಗೆ ಶಾಲೆಗೆ ಅಕ್ಷರ ಗಣಿತ ಕಲಿಕೆಗೆ ಪೂರಕವಾಗಿ ಕಲಿಕಾ ಸಾಮಾಗ್ರಿಗಳನ್ನು ವಿತರಿಸಿದ್ದು ಇದರಂತೆ ವಿದ್ಯಾರ್ಥಿಗಳು ಗಣಿತದಲ್ಲಿ ಮೇಧಾವಿಗಳಾಗಿದ್ದಾರೆ. ಈ ಶಾಲೆಯಲ್ಲಿ 1ನೇ ತರಗತಿಯ ವಿದ್ಯಾರ್ಥಿಗಳು ಸಹ 1ರಿಂದ 20ರವರೆಗಿನ ಮಗ್ಗಿಯನ್ನು ಸೀದಾ ಹಾಗೂ ಉಲ್ಟಾ ಹೇಳುವಷ್ಟು ಬುದ್ಧಿವಂತರಾಗಿದ್ದಾರೆ.

**ಸ್ಟೇಟ್ ಅವಾರ್ಡ್**

ಶಾಲೆಯ ಮಕ್ಕಳು ರಸ ಪ್ರಶ್ನೆಯಲ್ಲಿ ಜಿಲ್ಲಾಮಟ್ಟದವರೆಗೆ 3 ಬಾರಿ ಹೋಗಿ ಬಂದಿದ್ದಾರೆ. ಇದರಲ್ಲಿ ಒಂದು ಬಾರಿ ದ್ವಿತೀಯ ಬಹುಮಾನ ಪಡೆದಿದ್ದಾರೆ. ಈ ಶಾಲೆಗೆ 2013 ಏಪ್ರಿಲ್ ತಿಂಗಳಿನಲ್ಲಿ ಅಕ್ಷರ ಫೌಂಡೇಶನ್ 'ಟುಗೆದರ್ ವಿ ಕ್ಯಾನ್' ಎಂದು ಸ್ಟೇಟ್ ಅವಾರ್ಡ್ ಬಂದಿದೆ.

**ಗಣ್ಯರು, ವಿದೇಶಿಯರ ಭೇಟಿ**

ಉತ್ತಮ ಶಿಕ್ಷಣ ಪಡೆಯಲು ಎಲ್ಲರೂ ವಿದೇಶಗಳಿಗೆ ಹೋಗುವುದು ವಾಡಿಕೆ. ಆದರೆ, ಕಿರಿಯ ಪ್ರಾಥಮಿಕ ಶಾಲೆ ಗುಣಮಟ್ಟ ಕಂಡು, ಅದರ ಹಿಂದಿನ ಮರ್ಮ ಅರಿಯಲು ವಿದೇಶಿಯರು ಈ ಶಾಲೆಗೆ ಭೇಟಿ ನೀಡಿರುವುದು ವಿಶೇಷ.

2017ರಲ್ಲಿ ಅಮೆರಿಕ, ಸ್ವೀಡನ್ ದೇಶದವರು ಶಾಲೆಗೆ ಭೇಟಿ ನೀಡಿ, ಅಕ್ಷರ ಗಣಿತದ ವಿಶೇಷ, ಅದನ್ನು ಕಲಿಸುವ ವಿಧಾನವನ್ನು ಅರಿತು ಹೋಗಿದ್ದಾರೆ. 2016ರಲ್ಲಿ ಒಡಿಶಾ ಕಮೀಷನರ್, 2015-16ರಲ್ಲಿ ಐಎಎಸ್ ಅಧಿಕಾರಿ ವಿ.ಪಿ. ಬಳಿಗಾರ್ ಭೇಟಿ ನೀಡಿ ಇಲ್ಲಿ ಮಕ್ಕಳ ಅಕ್ಷರ ಗಣಿತದ ಪ್ರತಿಭೆ ಕಂಡು ಬೆರಗಾಗಿದ್ದಾರೆ.

**ಟೈಮ್ಸ್ ಆಫ್ ಇಂಡಿಯಾ ಮೆಚ್ಚುಗೆ**

ಶಾಲೆ ರಾಷ್ಟ್ರಮಟ್ಟದಲ್ಲೂ ಸದ್ದು ಮಾಡಿದೆ. ಶಾಲೆಯಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ಅಕ್ಷರ ಗಣಿತದ ವಿಶೇಷತೆ ಬಗ್ಗೆ ವಿಜಯ ಕರ್ನಾಟಕದ ಸಹೋದರ ಪತ್ರಿಕೆ ಟೈಮ್ಸ್ ಆಫ್ ಇಂಡಿಯಾ 2016ರಲ್ಲಿ ಶಾಲೆಯ ಸಂಪೂರ್ಣ ಮಾಹಿತಿಯನ್ನು ಪ್ರಕಟಿಸಿದೆ.



ಮಾರಸಂಡಹಳ್ಳಿ ಗ್ರಾಮದ ಸರಕಾರಿ ಶಾಲೆಗೆ ವಿದೇಶಿಯರು ಭೇಟಿ ನೀಡಿದ ಕ್ಷಣ.

### ಅಬ್ಬಾಬ್ಬಾ ಏನುಂಟು, ಏನಿಲ್ಲ?

**ಶಾಲೆಯ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಟೈ, ಶೂ, ಬೆಲ್ಟ್, ಐಡೆಂಟಿ ಕಾರ್ಡ್, ಉತ್ತಮ ಬೆಂಚುಗಳ ವ್ಯವಸ್ಥೆ, ವ್ಯವಸ್ಥಿತ ಶೌಚಾಲಯ, ಕುಡಿವ ನೀರಿನ ವ್ಯವಸ್ಥೆ, ಶಾಲಾ ಆವರಣದಲ್ಲಿ ಪುಟ್ಟದಾದ ಶ್ರೀ ವಿನಾಯಕ ದೇವಾಲಯ. ಶಾಲೆಯ ಗೋಡೆಗಳ ಮೇಲೆ ಅಕ್ಷರಗಳ ಚಿತ್ತಾರ, ಪರಿಸರದ ಕಾಳಜಿಯುಳ್ಳ ಬರಹಗಳು, ಪ್ರಾಣಿ ಪಕ್ಷಿಗಳ ಚಿತ್ರಗಳು, ಇದರ ಜತೆಗೆ ಶಾಲಾ ಕಾಂಪೌಂಡ್ ಮುಂಭಾಗದ ಗೋಡೆಯ ಮೇಲೆ ಶಾಲೆಯ ರೇಡಿಯೋ ಪಾಠದ ವಿವರ ಹಾಗೂ ಸುಭಾಷಿತ ವಿವರಗಳನ್ನು ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಬರೆಲಾಗಿರುತ್ತದೆ.**